# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಕವಿಪ್ರನಿನಿ ಮತ್ತು ವಿಸಕಂಗಳ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ**

ಕವಿಪ್ರನಿನಿ/ಬಿ93/35989/2018-19/ ಸಿಯ್ಸ-14

ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರು. ದಿನಾಂಕ: 13 JUL 2018

**NDCPS ಅಧಿಕಾರಿಗಳ/ನೌಕರರ ವೈಯಕ್ತಿಕ ಗಮನಕ್ಕೆ**

## ಸುತ್ತೋಲೆ

ವಿಷಯ: ನೂತನ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆಗೆ (NDCPS) ಸಂಬಂಧಿಸಿದ ಅಧಿಕಾರಿ/ನೌಕರರ ವೈಯಕ್ತಿಕ/ಸೇವಾ ಮಾಹಿತಿಗಳ ತಿದ್ದುಪಡಿ ಬಗ್ಗೆ.

ಉಲ್ಲೇಖ: 1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:05.07.2007.
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4977/2005-06 ದಿನಾಂಕ:21.08.2007.
3. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ93/35989/2016-17/cys-12 ದಿ:14.12.2016.
4. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ93/35989/2018-19/cys-11 ದಿ:08.05.2018.

*********

ಕವಿಪ್ರನಿನಿ/ವಿಸಕಂಗಳಲ್ಲಿ ದಿನಾಂಕ:01..04.2006 ರ ನಂತರ ಸೇವೆಗೆ ನೇಮಕಾತಿ ಹೊಂದಿರುವ ಎಲ್ಲಾ ಖಾಯಂ ಅಧಿಕಾರಿ/ನೌಕರರಿಗೆ ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು ಉಲ್ಲೇಖ(1) ರ ನಿಗಮದ ಆದೇಶದಂತೆ ಜಾರಿಗೆ ತರಲಾಗಿರುತ್ತದೆ. ಸದರಿ ಯೋಜನೆಯ ಅನುಷ್ಠಾನಕ್ಕೆ ಅನುಸರಿಸಬೇಕಾದ ನಿಯಮಗಳ ಬಗ್ಗೆ ಉಲ್ಲೇಖ (2)ರ ನಿಗಮದ ಆದೇಶದಲ್ಲಿ ವಿವರವಾಗಿ ತಿಳಿಸಲಾಗಿರುತ್ತದೆ. ಅದರಂತೆ ಈ ಯೋಜನೆ ವ್ಯಾಪ್ತಿಯ ಅಧಿಕಾರಿ/ನೌಕರರು ಕೆಲಸಕ್ಕೆ ಸೇರಿದ ಕೂಡಲೇ ನಿಗದಿತ ಅನುಬಂಧ-1 ರಲ್ಲಿ ನಿಗದಿಪಡಿಸಿರುವ ಸಂಪೂರ್ಣ ಮಾಹಿತಿಗಳನ್ನು ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಅನುಬಂಧ-1 ರಲ್ಲಿ ಸಲ್ಲಿಸಿರುವ ಮಾಹಿತಿಗಳನ್ನು ಆಧರಿಸಿ, ಕೆಇಎನ್‌ಡಿಸಿಪಿಎಸ್ ಘಟಕದಿಂದ PPAN - Permanant Pensionary Account Number ಹಂಚಿಕೆ ಮಾಡಲಾಗುವುದು. ಈ ರೀತಿ ಅನುಬಂಧ-1 ರಲ್ಲಿ ಸಲ್ಲಿಸಿರುವ ಮಾಹಿತಿಗಳು ಅಧಿಕಾರಿ/ನೌಕರರಿಗೆ ಸಂಬಂಧಿಸಿದ ಮೂಲ ಮಾಹಿತಿಯಾಗಿದ್ದು, ನೇಮಕಾತಿ ಹೊಂದಿದ ಸಂದರ್ಭದಲ್ಲಿ ದಾಖಲೆಗೊಂಡಿದ್ದು, ಯಾವುದೇ ಕಾರಣಕ್ಕೂ ಮುಂದೆ ಬದಲಾವಣೆ ಮಾಡಲು ಅವಶ್ಯವಿರುವುದಿಲ್ಲ. ಈ ಪ್ರಕ್ರಿಯೆ ಅಧಿಕಾರಿ/ನೌಕರರು ಮೊದಲು ಕಾರ್ಯ ವರದಿ ಮಾಡಿಕೊಂಡ ಲೆಕ್ಕಘಟಕದಲ್ಲಿ ಸಲ್ಲಿಸುವ ಸೇವಾ ಪುಸ್ತಕದ ಮಾದರಿಯಲ್ಲಿಯೇ ಇದ್ದು ಯಾವುದೇ ಮಾರ್ಪಾಡುಗಳಿಲ್ಲದೇ ಇರಬೇಕಾಗುತ್ತದೆ.

ಆದಾಗ್ಯೂ, ಅನುಬಂಧ-1ರಲ್ಲಿ ಮಾಹಿತಿಯನ್ನು ದಾಖಲಿಸುವಾಗ ಕಣ್ತಪ್ಪಿನಿಂದ ಅಥವಾ ತಂತ್ರಾಂಶಕ್ಕೆ ಒಳಪಡಿಸುವಾಗ ತಪ್ಪುಗಳಿದ್ದರೆ, ಕೆಲವು ಮಾಹಿತಿಗಳನ್ನು ಮಾತ್ರ ತಿದ್ದುಪಡಿ ಮಾಡಬಹುದಾಗಿರುತ್ತದೆ. ಇನ್ನುಳಿದ ಮಾಹಿತಿಗಳು ಉದಾಹರಣೆಗೆ, ಹುದ್ದೆ, ಕಂಪನಿ, ವೇತನ ಶ್ರೇಣಿ, ಮೂಲ ವೇತನ ಮುಂತಾದವು ನಂತರ ಬದಲಾವಣೆಗೊಂಡಿದ್ದರೂ ಸಹಾ ಅನುಬಂಧ-1ರಲ್ಲಿ ಯಾವುದೇ ತಿದ್ದುಪಡಿ ಮಾಡಲಾಗುವುದಿಲ್ಲ. ಅನುಬಂಧ-1ರ ಮಾಹಿತಿಗಳು ಸೇರಿದ ದಿನಾಂಕದಂದು ಅನ್ವಯಿಸುವ ವಿವರಗಳನ್ನು ಮಾತ್ರ ಸೂಚಿಸುತ್ತವೆ. ಇವುಗಳ ಬದಲಾವಣೆಯ ಜಾಡನ್ನು (Track) ಕೆಇಎನ್‌ಡಿಸಿಪಿಎಸ್ ಘಟಕದಿಂದ ಮಾಡಲಾಗುವುದಿಲ್ಲ ಹಾಗೂ ವಂತಿಗೆ ಖಾತೆ ನಿರ್ವಹಣೆಗೆ ಅದರ ಅಗತ್ಯತೆಯೂ ಇರುವುದಿಲ್ಲ.

ಆದರೆ, ಉಲ್ಲೇಖ (4) ರ ಸುತ್ತೋಲೆಯನ್ನು ಉಲ್ಲೇಖಿಸಿ, ಅನುಬಂಧ-1 ರಲ್ಲಿ ಈಗಾಗಲೇ ಸಲ್ಲಿಸಿರುವ ವೈಯಕ್ತಿಕ ವಿವರಗಳನ್ನು ತಿದ್ದುಪಡಿ ಮಾಡುವಂತೆ ಕೋರಿ ಈ ಕಛೇರಿಗೆ ಕವಿಪ್ರನಿನಿ/ವಿಸಕಂಗಳ ಕಛೇರಿಗಳಿಂದ ಹಲವಾರು ಮನವಿ ಪತ್ರಗಳು ಬರುತ್ತಿವೆ.

ಮೇಲಿನ ಅಂಶಗಳನ್ನು NDCPS ಯೋಜನೆಗೆ ಒಳಪಡುವ ನೌಕರರು/ಅಧಿಕಾರಿಗಳ ಗಮನಕ್ಕೆ ತರುತ್ತಾ, ಅನುಬಂಧ-1ರಲ್ಲಿ ತಿದ್ದುಪಡಿ ಮಾಡಬಹುದಾದ ಕೆಳಗಿನ ಅಂಶಗಳ ಬಗ್ಗೆ ಮಾತ್ರ ಮನವಿ ಸಲ್ಲಿಸಲು ಸೂಚಿಸಲಾಗಿದೆ.

| **ಅನುಬಂಧ-1 ರಲ್ಲಿ ತಿದ್ದುಪಡಿಗೆ ಒಳಪಡುವ ಅಂಶಗಳು** | **ಅನುಬಂಧ-1 ರಲ್ಲಿ ತಿದ್ದುಪಡಿಗೆ ಒಳಪಡದ ಅಂಶಗಳು(ಸೇವೆಗೆ ಸೇರಿದ ದಿನಾಂಕದಲ್ಲಿ ಇದ್ದಂತೆ)** |
|---|---|
| 1. ಹೆಸರಿನಲ್ಲಿ ಕಾಗುಣಿತ, ಇನಿಷಿಯಲ್ಸ್ ದೋಷಗಳಿದ್ದರೆ<br>2. ಜನ್ಮ ದಿನಾಂಕ (ಸೇವಾ ಪುಸ್ತಕದ ದೃಢೀಕರಣ ಆಧರಿಸಿ)<br>3. ನಾಮನಿರ್ದೇಶನದ ಬದಲಾವಣೆ (ಅನುಬಂಧ-1Aರಲ್ಲಿ ಸಲ್ಲಿಸಬೇಕು). | 1. ಪಿಪಿಎಎನ್ ಖಾತೆ ಸಂಖ್ಯೆ<br>2. ಹುದ್ದೆ<br>3. ಕಂಪನಿ<br>4. ನಿಗಮ ಕಛೇರಿ<br>5. ವಲಯ<br>6. ವೃತ್ತ<br>7. ವಿಭಾಗ<br>8. ಕಾರ್ಯ ನಿರ್ವಹಿಸುತ್ತಿರುವ ಸ್ಥಳ<br>9. ಲೆಕ್ಕ ಘಟಕದ ಸಂಖ್ಯೆ<br>10. ವೇತನ ಶ್ರೇಣಿ<br>11. ಮೂಲ ವೇತನ<br>12. ಸೇವೆಗೆ ಸೇರಿದ ದಿನಾಂಕ |

ಈಗಾಗಲೇ ಸ್ವೀಕೃತವಾಗಿರುವ ಮನವಿ ಪತ್ರಗಳನ್ನು ಮೇಲಿನ ಮಾರ್ಗಸೂಚಿಯಂತೆ ಇತ್ಯರ್ಥ ಪಡಿಸಲಾಗುವುದು. ತಿದ್ದುಪಡಿ ಮಾಡಲಾಗದ ಅಂಶಗಳ ಬಗ್ಗೆ ಸಲ್ಲಿಸಿರುವ ಮನವಿಗಳ ಬಗ್ಗೆ ಯಾವುದೇ ಕ್ರಮ ಜರುಗಿಸಲಾಗುವುದಿಲ್ಲ.

ನಿರ್ದೇಶಕರು(ಆ ಮತ್ತು ಮಾ.ಸಂ)

ಪ್ರತಿಗಳು:

1. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ವಿಸಕಂಗಳು.
2. ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಲ್ಲಾ ವಿಸಕಂಗಳು.
3. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
4. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
5. ನಿರ್ದೇಶಕರು (ಹಣಕಾಸು), ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ, ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
6. ಎಲ್ಲಾ ಮುಖ್ಯ ಇಂಜಿನಿಯರ್, ಕವಿಪ್ರನಿನಿ/ ಎಸ್ಕಾಂಗಳು.
7. ಎಲ್ಲಾ ಅಧೀಕ್ಷಕ ಇಂಜಿನಿಯರ್/ ನಿಯಂತ್ರಣಾಧಿಕಾರಿ, ಕವಿಪ್ರನಿನಿ / ಎಸ್ಕಾಂಗಳು.

   **ಅಧೀಕ್ಷಕ ಇಂಜಿನಿಯರ್ (ಐ.ಟಿ ಮತ್ತು ಎಂ.ಐ.ಎಸ್) ರವರ ಮಾಹಿತಿಗಾಗಿ ಕಳುಹಿಸುತ್ತಾ, ಆದೇಶದ ಪ್ರತಿಯನ್ನು http:www.kptcl.com/eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡುವಂತೆ ಕೋರಲಾಗಿದೆ.**

8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ, ಕವಿಪ್ರನಿನಿ /ಎಸ್ಕಾಂಗಳು.
9. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ /ಎಸ್ಕಾಂಗಳು.
10. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ), ಕವಿಪ್ರನಿನಿ /ಎಸ್ಕಾಂಗಳು.